# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2764
ಮಾನ್ಯ ಸದಸ್ಯರ ಹೆಸರು : ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 28.03.2022
ಉತ್ತರಿಸುವ ಸಚಿವರು : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು

*****

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| 01. | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ನಿಗಮ/ಮಂಡಳಿ/ಸೊಸೈಟಿ/ಪ್ರಾಧಿಕಾರ ಮತ್ತು ಇತರೆ ಅಂಗ ಸಂಸ್ಥೆಗಳಾವುವು; ಇವುಗಳನ್ನು ಯಾವ ಉದ್ದೇಶಗಳಿಗಾಗಿ ಸ್ಥಾಪಿಸಲಾಗಿದೆ; (ನಿಗಮವಾರು ವಿಳಾಸದೊಂದಿಗೆ ವಿವರವಾದ ಮಾಹಿತಿ ನೀಡುವುದು) | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ**<br>1. ಕೆ.ಎಸ್.ಎಂ.ಎಸ್.ಸಿ.ಎಲ್. (ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ) ಪಿಹೆಚ್‌ಐ ಕಟ್ಟಡ, ಎಸ್.ಜೆ.ಪಿ ಪಾಲಿಟೆಕ್ನಿಕ್ ಎದುರ, ಕೆ.ಆರ್ ವೃತ್ತ, ಶೇಷಾದ್ರಿರಸ್ತೆ, ಬೆಂಗಳೂರು-560001. ರಾಜ್ಯದಲ್ಲಿ ಔಷಧಿಗಳು, ರಸಾಯನಿಕಗಳು, ವೈದ್ಯಕೀಯ ಉಪಕರಣಗಳು ಮತ್ತುಇತರೆ ಸಾಮಗ್ರಿಗಳ ಸಂಗ್ರಹಣೆ ಮತ್ತು ಸರಬರಾಜು ವ್ಯವಸ್ಥೆಯನ್ನು ಉತ್ತಮಗೊಳಿಸುವ ಸಲುವಾಗಿ ಕಂಪನಿಗಳ ಕಾಯ್ದೆ 2013ರ ಪ್ರಕಾರ ನೊಂದಾಯಿಸಲಾಗಿರುತ್ತದೆ.<br><br>2. ಎನ್.ಹೆಚ್.ಎಂ.(ರಾಷ್ಟ್ರೀಯ ಆರೋಗ್ಯ ಅಭಿಯಾನ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, 1ನೇ ಮಹಡಿ, ಆರೋಗ್ಯಸೌಧ ಕಟ್ಟಡ, ಬೆಂಗಳೂರು-560023. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕೇಂದ್ರ ಸರ್ಕಾರದ ಯೋಜನೆಯಾದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ರಾಜ್ಯ ಮಟ್ಟದಲ್ಲಿ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ/ಸೊಸೈಟಿ (State Health Society) ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ/ ಸೊಸೈಟಿ (District Health Society) ಮೂಲಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದ ಹಾಗೂ ಅಗತ್ಯ ಮಾರ್ಗದರ್ಶನ ನೀಡುತ್ತದೆ.<br><br>• ಗ್ರಾಮೀಣ ಮತ್ತು ನಗರ ಪ್ರದೇಶದ ಜನರಿಗೆ ಅದರಲ್ಲೂ ವಿಶೇಷವಾಗಿ ದುರ್ಬಲ ವರ್ಗದವರಿಗೆ ಕೈಗೆಟಕುವಂತೆ ಗುಣಾತ್ಮಕ ಆರೋಗ್ಯ ಸೇವೆಗಳನ್ನು ಒದಗಿಸಲು, ತಾಯಿ ಮರಣ ಮತ್ತು ಶಿಶು ಮರಣವನ್ನು ಕಡಿಮೆ ಮಾಡಲು, ಸಾಂಕ್ರಾಮಿಕ ಮತ್ತು ಅಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸಲು, ಎಲ್ಲಾ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದಲ್ಲಿ ಕ್ರಿಯಾ ಯೋಜನೆಯನ್ನು ತಯಾರಿಸಲು ಹಾಗೂ ಕಾರ್ಯಕ್ರಮ ಅನುಷ್ಠಾನಗೊಳಿಸಲು ಜಿಲ್ಲಾಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘವು ಮುಖ್ಯ ಪಾತ್ರ ವಹಿಸುತ್ತದೆ.<br><br>• ವಿವಿಧ ಇಲಾಖೆಗಳ ಸಮನ್ವಯತೆಯೊಂದಿಗೆ ಅನೇಕ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮವನ್ನು |

ಅನುಷ್ಠಾನಗೊಳಿಸುವಲ್ಲಿ ರಾಜ್ಯ ಮತ್ತು ಜಿಲ್ಲಾ ಆರೋಗ್ಯ ಸಂಘಗಳು ಪ್ರಮುಖ ಪಾತ್ರ ವಹಿಸುತ್ತದೆ.

- ಉದಾ: ಪಲ್ಸ್ ಪೋಲಿಯೋ, ಮೀಸಲ್ಸ್, ಬೆಲ್ಲಾಕ್ಯಾಂಪೇನ್, ಡೆಂಗ್ಯೂಜ್ವರ ನಿಯಂತ್ರಣ, ಕೊರೋನಾ-19 ತಡೆಗಟ್ಟುವಿಕೆ.
- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣದಡಿಯಲ್ಲಿ ಬರುವ ಎಲ್ಲಾ ಆಸ್ಪತ್ರೆಗಳು ಜನರಿಗೆ ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.
- ಎಲ್ಲಾ ವರ್ಗದ ಜನತೆಯ ಅವಶ್ಯಕತೆಗಳಿಗೆ ಸ್ಪಂದಿಸುವ ಸಮಾನಕರ, ಎಟುಕಬಲ್ಲ ಗುಣಮಟ್ಟ ಕಾಯ್ದುಕೊಂಡು ಆರೋಗ್ಯ ರಕ್ಷಣೆಯನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ.

3. ಎಸ್.ಎ.ಎಸ್.ಟಿ (ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, 7ನೇ ಮಹಡಿ, ಆರೋಗ್ಯಸೌಧ ಕಟ್ಟಡ, ಬೆಂಗಳೂರು-560023 ಕರ್ನಾಟಕ ರಾಜ್ಯದಲ್ಲಿ ಬಡತನದ ರೇಖೆಗಿಂತ ಕೆಳಗಿರುವ ಬಿಪಿ.ಎಲ್. ಕುಟುಂಬಗಳಿಗೆ ಆರೋಗ್ಯ ಯೋಜನೆಗಳನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ಭಾರತೀಯ ಟ್ರಸ್ಟ್ ಕಾಯ್ದೆ ಅಡಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಸ್ಥಾಪಿಸಿ ನೋಂದಣಿ ಮಾಡಲಾಗಿರುತ್ತದೆ.

4. ಕೆ.ಎಸ್.ಎ.ಪಿ.ಎಸ್. (ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, 3ನೇ ಮಹಡಿ, ಆರೋಗ್ಯಸೌಧ ಕಟ್ಟಡ, ಬೆಂಗಳೂರು-560023. ಸದರಿ ಸಂಸ್ಥೆಯನ್ನು ರಾಜ್ಯದಲ್ಲಿನ ಜನ ಸಾಮಾನ್ಯರಿಗೆ ಹೆಚ್.ಐ.ವಿ. ಪರೀಕ್ಷೆ, ಚಿಕಿತ್ಸೆ, ಮತ್ತು ನಿಯಂತ್ರಣಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಉದ್ದೇಶಕ್ಕಾಗಿ ಸ್ಥಾಪಿಸಲಾಗಿರುತ್ತದೆ.

5. ಕೆ.ಎಸ್.ಎಂ.ಹೆಚ್.ಎ. (ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, 4ನೇ ಮಹಡಿ, ಆರೋಗ್ಯಸೌಧ ಕಟ್ಟಡ, ಬೆಂಗಳೂರು-560023- ಮಾನಸಿಕ ಖಾಯಿಲೆಗಳಿಂದ ನರಳುತ್ತಿರುವ ರೋಗಿಗಳಿಗೆ ಆರೈಕೆ ಮತ್ತು ಮಾನವಹಕ್ಕು ರಕ್ಷಣೆ, ಮಾನಸಿಕ ಆರೈಕೆ 2017ರ ಮುಖ್ಯಉದ್ದೇಶವಾಗಿದೆ.

6. ಕರ್ನಾಟಕ ಆಯುರ್ವೇದ ಮತ್ತು ಯುನಾನಿ ಮಂಡಳಿ, ಬ್ರಿಗೇಡ್ ಪ್ಲಾಜಾ 1ನೇ ಮಹಡಿ, ಆನಂದ್ ರಾವ್ ವೃತ್ತ, ಗಾಂಧಿನಗರ, ಬೆಂಗಳೂರು-560009.

ಈ ಮಂಡಳಿಯು ಕರ್ನಾಟಕ ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಸಿದ್ಧ, ಯುನಾನಿ ಮತ್ತು ಯೋಗ ಪರಿಕರ್ಮಿಗಳ ನೊಂದಾವಣಿ ಮತ್ತು ವೈದ್ಯಕೀಯ ಪರಿಕರ್ಮಿಗಳ ವಿವಿಧ ಪ್ರಬಂಧಕಗಳ ಕಾಯ್ದೆ 1961 ರಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಸಿದ್ಧ, ಯುನಾನಿ ಮತ್ತು ಯೋಗ ಪ್ರಕಾರಗಳ ವೈದ್ಯಶಾಸ್ತ್ರಗಳ ವ್ಯಾಸಂಗ ಮತ್ತು ಪ್ರಸರಣವನ್ನು ಉತ್ತೇಜಿಸುವ ದೃಷ್ಟಿಯಿಂದ ಮತ್ತು ಕ್ರೋಢೀಕೃತ ಪ್ರಕಾರದಲ್ಲಿ ವೈದ್ಯ ಪರಿಕರ್ಮಿಗಳ

| | | |
|---|---|---|
| | | ನೊಂದಾಣಿಗಾಗಿ ಮತ್ತು ವೈದ್ಯ ಪರಿಕರ್ಮಿಗಳಿಗೆ ಸಂಬಂಧಿಸಿದ ಸಾಮಾನ್ಯ ಕಾನೂನನ್ನು ಪ್ರಕಾರಗಳಲ್ಲಿ ಪರಿಕರ್ಮಿಗಳನ್ನು ನೊಂದಾಯಿಸಲು ಅನುವು ಮಾಡಿಕೊಡುವುದು ಅಗತ್ಯವೆಂದು ಕಂಡು ಬಂದಿರುವುದರಿಂದ ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿಯನ್ನು ಸ್ಥಾಪಿಸಲಾಯಿತು.<br><br>7. ಕರ್ನಾಟಕ ಹೋಮಿಯೋಪತಿ ಮಂಡಳಿ, ಧನ್ವಂತರಿ ರಸ್ತೆ, ಬೆಂಗಳೂರು-560009. ದೂರವಾಣಿ ಸಂಖ್ಯೆ: 080-22873195.<br><br>ದಿ ಕರ್ನಾಟಕ ಹೋಮಿಯೋಪತಿ ಪ್ರಾಕ್ಟೀಷನರ್ಸ್ ಆಕ್ಟ್ 1961ರ ಪ್ರಕಾರ ಆಡಳಿತಾತ್ಮಕ ಹಾಗೂ ಕಾನೂನಾತ್ಮಕ ಉದ್ದೇಶಕ್ಕಾಗಿ ನೊಂದಣಿ ರಿಜಿಸ್ಟರ್ ಅನ್ನು ನಿರ್ವಹಿಸುವುದು.<br><br>ದಿ ಕರ್ನಾಟಕ ಹೋಮಿಯೋಪತಿ ಪ್ರಾಕ್ಟೀಷನರ್ಸ್ ರೂಲ್ಸ್ 1964 ಪ್ರಕಾರ ಹೋಮಿಯೋಪತಿ ವೈದ್ಯರುಗಳ ನೋಂದಣಿ ಮಾಡುವುದು. ಮಂಡಳಿಯಲ್ಲಿ ನಡೆಸಿದ ಪರೀಕ್ಷೆಗಳ ದಾಖಲಾತಿಗಳನ್ನು ನಿರ್ವಹಿಸುವುದು (ಎಲ್.ಸಿ.ಇ.ಹೆಚ್., ಜಿ.ಸಿ.ಇ.ಹೆಚ್., ಬಿ.ಹೆಚ್.ಎಂ.ಎಸ್,) |
| 02. | ಕಳೆದ 2 ವರ್ಷಗಳಲ್ಲಿ ಸದರಿ ನಿಗಮ/ಮಂಡಳಿ/ಸೊಸೈಟಿ/ಪ್ರಾಧಿಕಾರ ಮತ್ತು ಇತರೆ ಸಂಸ್ಥೆಗಳಿಗೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸಿ.ಎಸ್.ಆರ್. ನಿಧಿಯಡಿ ಎಷ್ಟು ಹಣ ಬಂದಿದೆ; ಖರ್ಚಾಗಿರುವ ಮತ್ತು ಉಳಿಕೆಯಾಗಿರುವ ಹಣವೆಷ್ಟು; (ವಿವರವಾದ ಮಾಹಿತಿ ನೀಡುವುದು) | ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| 03. | ತುಮಕೂರು ಮತ್ತು ಮೈಸೂರು ಜಿಲ್ಲೆಯಲ್ಲಿ ಸದರಿ ಇಲಾಖೆಯಿಂದ ಸಿ.ಎಸ್.ಆರ್. ನಿಧಿ ಹಣ ಉಪಯೋಗಿಸಿಕೊಂಡು ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; (ವಿವರವಾದ ಮಾಹಿತಿ ನೀಡುವುದು) | ಮೈಸೂರು ಜಿಲ್ಲೆ ಮತ್ತು ತುಮಕೂರು ಜಿಲ್ಲೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕದ ವತಿಯಿಂದ ಸಿ.ಎಸ್.ಆರ್ ನಿಧಿಯಡಿ ನೇರವಾಗಿ ಯಾವುದೇ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ. ಆದಾಗ್ಯೂ, ಕೆಲವು ಖಾಸಗಿ ಸಂಸ್ಥೆಗಳು ಸಿ.ಎಸ್.ಆರ್ ನಿಧಿಯಡಿ ಕಾಮಗಾರಿಗಳನ್ನು ಸ್ವತ: ನಿರ್ವಹಿಸಿ ಇಲಾಖೆ ಬಳಕೆಗೆ ನೀಡಿರುತ್ತಾರೆ. ಕಾಮಗಾರಿಗಳ ವಿವರಗಳ ಪ್ರತಿಯನ್ನು ಅನುಬಂಧ-2ರಲ್ಲಿ ನೀಡಲಾಗಿದೆ. |
| 04. | ತುಮಕೂರು ಜಿಲ್ಲೆ ಸಾರ್ವಜನಿಕ ಆಸ್ಪತ್ರೆಯಲ್ಲಿ 2009-2010 ಮತ್ತು 2010-11ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳು ಯಾರು ಯಾರು? (ಅವರುಗಳ ಹೆಸರು, ವಿಳಾಸ, ಜಾತಿ, ಹುದ್ದೆಯ ಪದನಾಮ, ವೇತನ ಶ್ರೇಣಿ, ಮಾಸಿಕ ಪಡೆಯುತ್ತಿರುವ ವೇತನ ಹಾಗೂ ಮೊಬೈಲ್ ಸಂಖ್ಯೆಗಳೊಂದಿಗೆ ವಿವರವಾದ ಮಾಹಿತಿ ನೀಡುವುದು) | ತುಮಕೂರು ಜಿಲ್ಲೆಯ ಜಿಲ್ಲಾ ಆಸ್ಪತ್ರೆಯನ್ನು ಒಳಗೊಂಡಂತೆ ಸಾರ್ವಜನಿಕ ಆಸ್ಪತ್ರೆಗಳಲ್ಲಿ 2009-2010 ಮತ್ತು 2010-2011ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳ ವಿವರವನ್ನು ಅನುಬಂಧ-3ರಲ್ಲಿ ನೀಡಲಾಗಿದೆ. |

**ಕಡತ ಸಂಖ್ಯೆ: HFW 140 CORD 2022**

**(ಡಾ|| ಕೆ. ಸುಧಾಕರ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ**
**ಮತ್ತು ವೈದ್ಯಕೀಯ ಶಿಕ್ಷಣ ಸಚಿವರು**